# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 32 ಪಿಎಂಸಿ 2007

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 08.02.2007

## ಸುತ್ತೋಲೆ

**ವಿಷಯ:** ರಾಜ್ಯದಲ್ಲಿನ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ನಿಗದಿತ ಕಾರ್ಯಭಾರವಿಲ್ಲದ ಹೆಚ್ಚುವರಿ ಶಿಕ್ಷಕರನ್ನು ಕಾರ್ಯಭಾರವಿರುವ ಇತರೆ ಅನುದಾನಿತ ಖಾಸಗಿ ಶಾಲೆಗಳಿಗೆ ಹಂಚಿಕೆ ಮಾಡುವ ಬಗ್ಗೆ ದಿ. 9.6.2005ರ ಆದೇಶದಲ್ಲಿನ ಯೋಜನೆ ದಿ. 15.2.205ರ ಪೂರ್ವದಲ್ಲಿ ಉಂಟಾದ ಹೆಚ್ಚುವರಿ ಶಿಕ್ಷಕರಿಗೆ ಮಾತ್ರ ಅನ್ವಯವಾಗುತ್ತದೆ ಎಂಬ ಇತ್ಯಾದಿ ಷರತ್ತನ್ನು ಸಡಿಲಿಸುವ ಬಗ್ಗೆ.

**ಉಲ್ಲೇಖ:** ದಿ. 9.6.2005ರ ಸರ್ಕಾರದ ಆದೇಶ ಸಂಖ್ಯೆ ಇಡಿ 200 ಪಿಎಂಸಿ 99

* * * *

ರಾಜ್ಯದ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರನ್ನು (2000ಕ್ಕೂ ಮೇಲ್ಪಟ್ಟು) ಉಲ್ಲೇಖಿತ ದಿ. 9.6.2005ರ ಆದೇಶದಡಿ, ಕಾರ್ಯಭಾರವಿರುವ ಇತರೆ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಹಂಚಿಕೆ ಮಾಡುವ ಕುರಿತು ಒಂದು ಯೋಜನೆಯನ್ನು ರೂಪಿಸಲಾಗಿದ್ದು, ಅದು ದಿ. 15.2.2005ರ ಪೂರ್ವದಲ್ಲಿ ಉಂಟಾದ ಹೆಚ್ಚುವರಿ ಶಿಕ್ಷಕರಿಗೆ ಮಾತ್ರ ಅನ್ವಯಿಸುತ್ತದೆ ಹಾಗೂ ಆ ದಿನಾಂಕದ ನಂತರ ಉಂಟಾಗುವ ಹೆಚ್ಚುವರಿ ಶಿಕ್ಷಕರನ್ನು ಸೇವೆಯಿಂದ ರಿಟ್ರೆಂಚ್ ಮಾಡಿ, ಟರ್ಮಿನೇಟ್ ಮಾಡತಕ್ಕದ್ದೆಂದು ಸೂಚಿಸಲಾಗಿದೆ. ಅಲ್ಲದೇ, ಒಂದು ಬಾರಿಯ ಕ್ರಮವಾಗಿ ದಿ. 31.5.2007ರೊಳಗೆ ಹೆಚ್ಚುವರಿ ಶಿಕ್ಷಕರನ್ನು ಮರುಹಂಚಿಕೆ ಮಾಡಿ ಸರಿದೂಗಿಸಬೇಕಾಗಿರುತ್ತದೆ.

2. ದಿ. 31.5.2007ರೊಳಗೆ ಸರಿದೂಗಿಸಲಾಗದಿದ್ದಲ್ಲಿ, ಅವರುಗಳನ್ನು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 98 ಮತ್ತು 99ರ ಪ್ರಕಾರ ಅದನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು ಹಾಗೂ ನಿಬಂಧನೆಗಳು) ನಿಯಮಗಳು, 1999 ರ ನಿಯಮ 10 ಮತ್ತು 11ರೊಂದಿಗೆ ಓದಿಕೊಂಡಂತೆ ಇವುಗಳ ಪ್ರಕಾರ ಸಕ್ಷಮ ಪ್ರಾಧಿಕಾರ ಕ್ರಮ ಕೈಗೊಂಡು ರಿಟ್ರೆಂಚ್ ಮಾಡಿ ಅವರ ಸೇವೆಯನ್ನು ಟರ್ಮಿನೇಟ್ ಮಾಡತಕ್ಕದ್ದೆಂದು ಉಲ್ಲೇಖಿಸಲಾದ ದಿ. 9.6.2005ರ ಆದೇಶದ ಯೋಜನೆಯಲ್ಲಿ ಸೂಚಿಸಲಾಗಿತ್ತು.

3. ಮೇಲೆ ಉಲ್ಲೇಖಿಸಿದ ನಿಯಮ 11ರ ಉಪನಿಯಮ (1) ಈ ಕೆಳಕಂಡಂತೆ ಇರುತ್ತದೆ.

US PRIMARY

"11. Procedure to be followed by Competent Authority under Section 98 : (1) The Competent Authority may

G1 A(P) 80 15/12

24695 22/2/07

28/2

C 7(1)

either suo motu after personally ascertaining facts or on the report of one of the subordinate officers initiate action to retrench an employee by following as far as may be, the procedure under rule 10 and pass an order giving necessary directions to the Governing Council after having fully satisfied that retrenchment is called for due to any one or more of the reasons specified in rule 10 or section 98."

4. ದಿ. 9.6.2005ರ ಸದರಿ ಆದೇಶದ ಯೋಜನೆಯಲ್ಲಿನ ಕಂಡಿಕೆ 1 ರಲ್ಲಿ ಉಲ್ಲೇಖಿಸಲಾದ ದಿ. 15.2.2005ರ ಕಟ್ ಆಫ್ ದಿನಾಂಕವನ್ನು ತೆಗೆದುಹಾಕಬೇಕೇ ? ಮತ್ತು ಹೆಚ್ಚುವರಿ ಶಿಕ್ಷಕರ ಮರು ಹಂಚಿಕೆಯ ಪ್ರಕ್ರಿಯೆಯು ಒಂದು ನಿರಂತರ ಪ್ರಕ್ರಿಯೆಯೆಂದು ಪರಿಗಣಿಸಬೇಕೇ ? ಹಾಗೂ ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ಒಂದು ಕಟ್ ಆಫ್ ಡೇಟ್ ಹಾಗೂ ಒಂದು ಬಾರಿ ಯೋಜನೆ ಎಂಬ ಷರತ್ತನ್ನು ವಿಧಿಸುವುದು ಸೂಕ್ತವೇ ? ಎಂಬ ಅಂಶಗಳನ್ನು ಸರ್ಕಾರ ಪುನರ್ ಪರಿಶೀಲಿಸುತ್ತಿದೆ. ಈ ಕುರಿತು ಸರ್ಕಾರ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳಲು ಕಾಲಾವಕಶ ಬೇಕಾಗಿದೆ.

5. ಮೇಲಿನ ಕಂಡಿಕೆ 4 ರಲ್ಲಿ ಉಲ್ಲೇಖಿಸಲಾದ ಪರಿಶೀಲನೆಯ ನಂತರ ಸರ್ಕಾರ ತೆಗೆದುಕೊಳ್ಳಬಹುದಾದ ತೀರ್ಮಾನವನ್ನು ಬಾಕಿ ಇಟ್ಟು ದಿ. 15.2.2005ರ ನಂತರ ಉಂಟಾದ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಹಾಗೂ ದಿ. 31.5.2007ರ ಕಟ್ ಆಫ್ ದಿನಾಂಕದ ಒಳಗಡೆ ಹಂಚಿಕೆಯಾಗಿ ಸರಿದೂಗಿಸಲಾಗದ ಹೆಚ್ಚುವರಿ ಶಿಕ್ಷಕರನ್ನು ಸರ್ಕಾರ ಈ ಕುರಿತು ಮುಂದಿನ ಸೂಚನೆ ನೀಡುವವರೆಗೆ, ಸದ್ಯಕ್ಕೆ ರಿಟ್ರೆಂಚ್ ಮಾಡಕೂಡದೆಂದು ಈ ಮೂಲಕ ಸೂಚಿಸಲಾಗಿದೆ.

8.2.07
(ಬಿ. ಹೆಚ್. ಪಡಸಲಗಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ಗೆ :

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಗುಲ್ಬರ್ಗಾ/ಧಾರವಾಡ
2. ನಿರ್ದೇಶಕರು (ಪ್ರಾ.ಶಿ.), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ/ಧಾರವಾಡ
4. ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ
5. ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
6. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

(4–6: ನಿರ್ದೇಶಕರು (ಪ್ರಾ.ಶಿ.), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಖಾಂತರ)

US PRIMARY

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ನೃಪತುಂಗ ರಸ್ತೆ
ಬೆಂಗಳೂರು-01

ಸಂಖ್ಯೆ:ಸಿ7[1]ಪ್ರಾಶಿ.ಅ;ಇತರೆ-24/2006-07 ದಿನಾಂಕ:27.02.2007

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 32 ಪಿಎಂಸಿ 2007 ದಿನಾಂಕ:08.02.2007 ಪತ್ರದ ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

ಪ್ರತಿಯನ್ನು:

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
4. ಅನುದಾನ ಪ್ರಾಥಮಿಕ ಶಾಲೆಯ ಎಲ್ಲಾ ಕಾರ್ಯನಿರ್ವಾಹಕರಿಗೆ ಮಾಹಿತಿಗಾಗಿ.
5. ಕಛೇರಿ ಪ್ರತಿ.